ಬೈಂದೂರು ಕ್ಷೇತ್ರದ ಯಡ್ತರೆ ಸಹಕಾರ ಸಂಘದಲ್ಲಿ ಹೆಚ್ಚಿನ ಸಿಬ್ಬಂದಿ ಇರುವ ಬಗ್ಗೆ

2047(1879)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿರುವ ಒಟ್ಟು ಸಹಕಾರಿ ಸಂಸ್ಥೆಗಳು ಎಷ್ಟು? ಅವುಗಳಲ್ಲಿ ಲಾಭ ನಷ್ಟದಲ್ಲಿರುವ ಸಹಕಾರಿ ಸಂಸ್ಥೆಗಳು ಎಷ್ಟು?

2) ಬೈಂದೂರು ಕ್ಷೇತ್ರದ ಯಡ್ತರೆ ಸಹಕಾರಿ ಸಂಘ (ಬ್ಯಾಂಕ್)ನಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಸಿಬ್ಬಂದಿಯಿರುವುದು ನಿಜವೇ? ಇದಕ್ಕೆ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿ ಅಳವಡಿಸಲಾಗಿದೆಯೆ?

3) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು):

1) ದಿನಾಂಕ: 31-3-2001ರ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 29,930 ಸಂಘಗಳು ಇವೆ. ಅವುಗಳಲ್ಲಿ 14,229 ಸಹಕಾರ ಸಂಘಗಳು ಲಾಭದಲ್ಲಿದ್ದು, 13,308 ಸಹಕಾರ ಸಂಘಗಳು ನಷ್ಟದಲ್ಲಿವೆ.

2) ಅವಶ್ಯಕತೆಗಿಂತ ಹೆಚ್ಚಿನ ಸಿಬ್ಬಂದಿ ಇರುವುದು ಕಂಡು ಬರುವುದಿಲ್ಲ.

ಭಾಗಶಃ ಅಳವಡಿಸಲಾಗಿದೆ.

3) ಗೌರವ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 7457:93ರ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ಈ ಪ್ರಕರಣದಲ್ಲಿ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ತೆಂಗು ಬೆಳೆಗೆ ತಗಲಿರುವ ನುಸಿಪೀಡೆ ರೋಗ ನಿವಾರಣೆಗೆ ತೆಗೆದುಕೊಂಡಿರುವ ಕ್ರಮ.

238(2577)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ತೆಂಗು ಬೆಳೆ ತಗುಲಿರುವ ನುಸಿ ರೋಗ ಪೀಡೆ ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು?

2) ಇದಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು?

3) ನುಸಿರೋಗ ನಿವಾರಣೆಗೆ ನೀರಾ ತೆಗೆಯುವುದರಿಂದ ರೋಗ ನಿವಾರಣೆ ಆಗುತ್ತದೆಯೆ? ಹಾಗಿದ್ದಲ್ಲಿ ನೀರಾ ತೆಗೆಯಲು ಅನುಮತಿ ನೀಡಲು ಸರ್ಕಾರಕ್ಕೆ ಇರುವ ಅಡಚಣೆಗಳೇನು? (ವಿವರಗಳನ್ನು ಒದಗಿಸುವುದು).

1) ಕರ್ನಾಟಕ ರಾಜ್ಯದಲ್ಲಿ ತೆಂಗಿನ ಮರಗಳಿಗೆ ತಗುಲಿರುವ ನುಸಿಪೀಡೆ ನಿವಾರಣೆಗೆ ಕೈಗೊಂಡ ಕ್ರಮಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

2) 1999-2000 ಸಾಲಿನಲ್ಲಿ 244 ಲಕ್ಷ ರೂ. ಮತ್ತು 2000-01ನೇ ಸಾಲಿನಲ್ಲಿ 962 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

3) ತೆಂಗಿನ ಮರಗಳಲ್ಲಿ ಅರಳದ ಹೊಂಬಾಳೆಗಳಿಂದ ನೀರಾ ಇಳಿಸುವುದರಿಂದ ನುಸಿಗೆ ಎಳೆಕಾಯಿಗಳು ಸಿಗದೆ ನುಸಿಬಾಧೆ ನಿಯಂತ್ರಣಕ್ಕೆ ಸಹಕಾರಿಯಾಗಬಹುದಾದರೂ ಸಹ ಇದು ನುಸಿ ನಿಯಂತ್ರಣೆಗೆ ಶಾಶ್ವತ ಪರಿಹಾರವಲ್ಲವೆಂದು ಸಿಪಿಸಿಆರ್‌ಐ ಕಾಸರಗೋಡಿನ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಹಾಗಾದಲ್ಲಿ ನುಸಿಬಾಧೆ ನಿಯಂತ್ರಣಕ್ಕಾಗಿ ರಾಜ್ಯದ ಎಲ್ಲಾ ತೆಂಗಿನ ಮರಗಳಿಂದ ನೀರಾ ಇಳಿಸಬೇಕಾಗುತ್ತದೆ. ಕಾರಣ ಕೆಲವೇ ಮರಗಳಿಂದ ನೀರಾ ಇಳಿಸದೇ ಕಾಯಿ ಉತ್ಪಾದನೆಗೆ ಬಿಟ್ಟಿದ್ದಲ್ಲಿ ಅವುಗಳಿಂದ ನುಸಿ ಪುನಃ ಹರಡಲು ಅವಕಾಶವಾಗುತ್ತದೆ.

ಅಬಕಾರಿ ಇಲಾಖೆಯ ಪ್ರಕಾರ ಒಂದು ತೆಂಗಿನ ಮರದಿಂದ ಪ್ರತಿ ವರ್ಷ 180 ರಿಂದ 186 ಲೀಟರ್ ನೀರಾ ಇಳಿಸಬಹುದು. ರಾಜ್ಯದಲ್ಲಿರುವ ಸುಮಾರು ಏಳುಕೋಟಿ ತೆಂಗಿನ ಮರಗಳಿಂದ 1260 ಕೋಟಿ ಲೀಟರ್ ನೀರಾ ಉತ್ಪಾದನೆ ಆಗುತ್ತದೆ. 1999-2000ನೇ ಸಾಲಿನಲ್ಲಿ ರಾಜ್ಯದಲ್ಲಿ ಬಳಕೆಯಾದ ಮಧ್ಯದ ಪ್ರಮಾಣ 17 ಕೋಟಿ ಲೀಟರ್‌ಗಳು, ಇಷ್ಟು ಪ್ರಮಾಣದ ನೀರಾವನ್ನು ಕೇವಲ ಹತ್ತು ಲಕ್ಷ ತೆಂಗಿನ ಮರಗಳಿಂದ

ಮೈಸೂರು ತಾಲ್ಲೂಕಿನಲ್ಲಿ ಕಳಪೆ ಬಿತ್ತನೆ ಬೀಜ ಮಾರಾಟ.

2048(2531)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?